ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.97/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಿ.ಆರ್.ರಮೇಶಪ್ಪ | ಪಿ.ಡಬ್ಲ್ಯೂ.5 |
| ತಂದೆಯ ಹೆಸರು | : | ರಾಮಪ್ಪ | ಸಿ.ಡಬ್ಲ್ಯೂ.8 |
| ವಯಸ್ಸು | : | 53 ವರ್ಷ | |
| ವೃತ್ತಿ | : | ಎ.ಎಸ್.ಐ, ನಗರ ಪೊಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 09-06-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ದಿಃ16.03.2020 ರಿಂದ ಇಲ್ಲಿಯವರೆಗೆ ಚಿಕ್ಕಮಗಳೂರಿನ ನಗರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ31.03.2022 ರಂದು ಚಾಸಾ-11 ರವರು ಸ್ಥಳ ತನಿಖೆಗಾಗಿ ಚಿಕ್ಕಮಗಳೂರು ನಗರದ ಎಂ.ಜಿ. ರಸ್ತೆಯ ಭಾರತ್ ಮೆಟಲ್ ಸ್ಟೋರ್ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-11 ರವರ ಜೊತೆಗೆ ಚಾಸಾ-1 ರವರೂ ಕೂಡಾ ಇದ್ದು ನಂತರ ಪಂಚರನ್ನಾಗಿ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮದಲ್ಲಿ ಘಟನಾ ಸ್ಥಳದಲ್ಲಿ ಮಹಜರ್ ಅನ್ನು ಚಾಸಾ-11 ರವರು ತಯಾರಿಸಿರುತ್ತಾರೆ. ಸದರಿಯವರ ಉಕ್ತ ಲೇಖನದಂತೆ ನಾನು ನೋಟೀಸ್ ಮತ್ತು ಮಹಜರ್ ಅನ್ನು ಬರೆದಿರುತ್ತೇನೆ. ಮಹಜರ್ ಅನ್ನು ನೋಡುತ್ತಿದ್ದು

ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-2(ಸಿ) ಇರುತ್ತದೆ. ಮಹಜರ್ ಅನ್ನು ಸಂಜೆಃ 05.00 ಗಂಟೆಯಿಂದ 06.00 ಗಂಟೆಯವರೆಗೆ ಬರೆದಿರುತ್ತೇನೆ. ಆ ಸಮಯದಲ್ಲಿ ಒಂದು ಕಬ್ಬಿಣದ ಸರಳು ಮತ್ತು ಗಾಯಾಳುವಿನ ಒಂದು ಟೀ ಶರ್ಟ್ ಅನ್ನು ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ಸದರಿ ಮು.ಮಾ.1 ಮತ್ತು 2 ನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಆ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ರಿಂದ ನಿಪಿ-5 ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಈ ಕೇಸಿನ ಪಿರ್ಯಾದುದಾರರು ಸತೀಶ್ ಎನ್ನುವವರು ಇರುತ್ತಾರೆ. ನಿಪಿ-2 ಮಹಜರ್ ಅನ್ನು ನಾನು ಠಾಣೆಯಲ್ಲಿಯೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಇರುವ ಅಂಶಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಹಜರ್ ಬರೆಯುವ ಸಮಯದಲ್ಲಿ ಸ್ಥಳದಲ್ಲಿ ಯಾವುದೇ ವಸ್ತುಗಳು ಕಂಡುಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ದಿಃ31.03.2022 ರಂದು ಹೋಗಿರುತ್ತೇವೆ. ಘಟನೆ ನಡೆದು 3 ದಿನಗಳ ನಂತರ ನಾವು ಘಟನಾ ಸ್ಥಳಕ್ಕೆ ಹೋಗಿದ್ದ ಕಾರಣ ಸ್ಥಳದಲ್ಲಿ ಯಾವುದೇ ಕುರುಹುಗಳು ಕಂಡುಬರುವುದಿಲ್ಲ ಎಂದರೆ ಸರಿಯಲ್ಲ.

ಘಟನಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಅಂಗಡಿಗಳು ಇರುತ್ತದೆ ಎಂದರೆ ಸರಿ. ಸದರಿ ಅಂಗಡಿಗಳಲ್ಲಿ ಸಿ.ಸಿ ಕ್ಯಾಮೆರಾಗಳು ಇತ್ತೋ ಇಲ್ಲವೋ ಎಂದು ನಾನು ಗಮನಿಸಿರುವುದಿಲ್ಲ. ಸದರಿ ಅಂಗಡಿಗಳಲ್ಲಿ ಸಿ.ಸಿ ಕ್ಯಾಮೆರಾಗಳು ಇದ್ದರೂ

ಕೂಡಾ ಉದ್ದೇಶಪೂರ್ವಕವಾಗಿ ಮಹಜರ್ ನಲ್ಲಿ ಈ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಾವು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರು ಮು.ಮಾ.2 ಕಬ್ಬಿಣದ ರಾಡ್ ಅನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆದ ದಿನದಿಂದ ಮಹಜರ್ ತಯಾರಿಸುವ ದಿನದವರೆಗೆ ಮು.ಮಾ.2 ಕಬ್ಬಿಣದ ರಾಡ್ ಎಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಮು.ಮಾ.1 ಟಿ ಶರ್ಟ್ ಅನ್ನು ಘಟನಾ ಸ್ಥಳದಲ್ಲಿ ಹಾಜರುಪಡಿಸಿದ್ದನ್ನು ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ಸದರಿ ಟಿ ಶರ್ಟ್ ನಲ್ಲಿ ರಕ್ತದ ಕಲೆ ಕಂಡುಬಂದಿತ್ತು. ಮು.ಮಾ.2 ಕಬ್ಬಿಣದ ರಾಡ್ ನಲ್ಲಿ ರಕ್ತದ ಕಲೆ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಮು.ಮಾ.2 ನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಜರುಪಡಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮಹಜರ್ ಸಮಯದಲ್ಲಿ ಫೋಟೋವನ್ನು ನಮ್ಮ ಠಾಣಾ ಸಿಬ್ಬಂದಿಯಾದ ತಿಮ್ಮಪ್ಪರವರು ತೆಗೆದಿರುತ್ತಾರೆ. ಸದರಿ ಫೋಟೋವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ-1 ರವರು ತನ್ನ ಸ್ನೇಹಿತರನ್ನು ಠಾಣೆಗೆ ಕರೆದುಕೊಂಡು ಬಂದು ಹೇಳಿಕೆಯನ್ನು ನೀಡಿಸಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ನೋಟೀಸ್ ಅನ್ನು ಚಾಸಾ-2 ಮತ್ತು 3 ರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಉತ್ತರ ದಕ್ಷಿಣಕ್ಕೆ ಎಂ.ಜಿ ರಸ್ತೆ ಹಾಗೂ ಪಶ್ಚಿಮಕ್ಕೆ ಅಟಾಯರ್ ಎಂಬ ಬಟ್ಟೆ ಅಂಗಡಿ ಹಾಗೂ ಪೂರ್ವಕ್ಕೂ ಬಟ್ಟೆ ಅಂಗಡಿ ಇದ್ದು ಅದರ ಹೆಸರು ನನಗೆ ನೆನಪಿಲ್ಲ. ಘಟನಾ ಸ್ಥಳದಲ್ಲಿ ಮು.ಮಾ.1 ಮತ್ತು 2 ನ್ನು

ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ